ಊ) ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಯಲ್ಲಿ ನಿವೃತ್ತಿ ವೇತನ ದಾಖಲೆಗಳನ್ನು ತಯಾರಿಸಿ ಮಹಾ ಲೇಖಾಪಾಲರಿಗೆ ಕಳುಹಿಸಿ ನಿವೃತ್ತಿ ವೇತನ ಪಾವತಿ ಮಾಡಲು ಒಂದು ಕಾಲಮಿತಿಗೊಳಪಟ್ಟ ಕಾರ್ಯವಿಧಾನವಿದೆ. ನಿವೃತ್ತಿ ವೇತನ ಪ್ರಕರಣಗಳ ಶೀಘ್ರ ವಿಲೇವಾರಿಯಲ್ಲಿ ಎದುರಿಸುತ್ತಿರುವ ಅಡಚಣೆಗಳನ್ನು ಗಮನಿಸಿ ನಿಯಮಾವಳಿ ಮತ್ತು ವಿಧಾನಗಳನ್ನು ಧಾರಾಳವಾಗಿ ಸರಳೀಕರಿಸಿ ಸರ್ಕಾರ ಇತ್ತೀಚೆಗೆ ಆದೇಶಗಳನ್ನು ಹೊರಡಿಸಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಕಾರ್ಯಾಚರಣೆಯ ಬಗ್ಗೆ

೩೩. (೧೦೨) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ೧೯೮೦ರ ನಂತರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಪ್ರತಿ ವರ್ಷ ಎಷ್ಟು ಬಸ್‌ಗಳನ್ನು ಖರೀದಿಸಲಾಗಿದೆ ?

ಆ) ಹೊಸ ಚಾಸೀಸ್ ಖರೀದಿ ಮಾಡಿದ ಮೇಲೆ ಬಸ್ ಬಾಡಿ ಬಿಲ್ಡಿಂಗನ್ನು ಎಲ್ಲಿ ಕಟ್ಟಿಸಲಾಗುತ್ತದೆ ?

ಇ) ೧೯೮೦ರಿಂದ ಇಲ್ಲಿಯವರೆಗೆ ಅಪಘಾತವಾದಂತಹ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್‌ಗಳ ಸಂಖ್ಯೆ ಎಷ್ಟು, ಆಸ್ತಿ ಹಾಗೂ ಜೀವಹಾನಿ ವಿವರ ತಿಳಿಸಿ ?

ಈ) ಸಿಬ್ಬಂದಿ ವರ್ಗಕ್ಕೆ ರಾಜ್ಯಸರ್ಕಾರವು ಇಲ್ಲಿಯವರೆಗೆ ಕೊಟ್ಟಂತಹ ಪ್ರೋತ್ಸಾಹ ಹಣದ ಮೊತ್ತವೆಷ್ಟು ?

ಉ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬೇರೆ ಬೇರೆ ಕಂಪನಿಗಳಿಂದ ಎಷ್ಟು ಟೈರ್‌ಗಳನ್ನು ಪ್ರತಿ ವರ್ಷ ಖರೀದಿಸಲಾಗುತ್ತದೆ ?

ಊ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ೪ ವಿಭಾಗದಲ್ಲಿ ವಿಂಗಡಿಸಲು ಸರ್ಕಾರದವರ ವಿಳಂಬಕ್ಕೆ ಕಾರಣವೇನು?

ಶ್ರೀ ವೀರಣ್ಣ (ಸಾರಿಗೆ, ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಮಂತ್ರಿಗಳು).—

ಅ) ೧೯೮೦ರಿಂದ ಬಸ್ ಬಾಡಿ ಕಟ್ಟಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ವಾಹನ ಬಲಕ್ಕೆ ಸೇರಿಸಲಾದ ಬಸ್‌ಗಳ ಸಂಖ್ಯೆ ಈ ಕೆಳಕಂಡಂತಿದೆ:

೧೯೮೦-೮೧	೪೭೧
೧೯೮೧-೮೨	೯೨೪
೧೯೮೨-೮೩	೭೦೨
೧೯೮೩-೮೪	೬೭೦
೧೯೮೪-೮೫	೬೫೫
೧೯೮೫-೮೬	೧,೩೪೪

ಆ) ಪ್ರಾದೇಶಿಕ ಕಾರ್ಯಾಗಾರಗಳಲ್ಲಿ ಸಾಧ್ಯವಾದಷ್ಟು ಬಸ್ ಬಾಡಿಗಳನ್ನು ಕಟ್ಟಲಾಗುತ್ತಿದ್ದು ಉಳಿದ ಚಾಸಿಗಳನ್ನು ಹೊರಗಣ ಸಂಸ್ಥೆಗಳಿಗೆ ಕಟ್ಟಲು ಕೊಡಲಾಗುತ್ತಿದೆ. ಆ ಸಂಸ್ಥೆಗಳು ಈ ಕೆಳಕಂಡಂತಿವೆ:

೧. ಬೆಂಗಳೂರು ಬಾಡಿ ಬಿಲ್ಡರ್ಸ್ (ಪ್ರೈ) ಲಿ., ಬೆಂಗಳೂರು.
೨. ಅಜಾದ್ ಕೋಚ್ ಬಿಲ್ಡರ್ಸ್ (ಪ್ರೈ) ಲಿ, ಬೆಂಗಳೂರು
೩. ಇಂಟರ್‌ನ್ಯಾಷನಲ್ ಕೋಚ್ ಬಿಲ್ಡರ್ಸ್ ಲಿ, ಬೆಂಗಳೂರು.
೪. ಎಸ್. ಎಂ. ಕಣ್ಣಪ್ಪ ಆಟೋಮೊಬೈಲ್ಸ್. ಬೆಂಗಳೂರು.
೫. ಸೂರಿ ಇಂಡಸ್ಟ್ರೀಸ್, ಬೆಂಗಳೂರು.

೬. ಆಟೋ ಕಿಟ್ಸ್, ಬೆಂಗಳೂರು.
೭. ಎಂ.ಜಿ. ಆಟೋಮೊಬೈಲ್ಸ್. ಬಳ್ಳಾರಿ.
೮. ಕರ್ನಾಟಕ ಕೋಚ್ ವರ್ಕ್ಸ್, ಬಳ್ಳಾರಿ.
೯. ಹೈದರಾಬಾದ್ ಆಲ್ವಿನ್ ಲಿ, ಹೈದರಾಬಾದ್.
೧೦. ಪ್ರೆಸ್ಸಿಂಗ್ ಕಾಂಪೋನೆಂಟ್ಸ್ ಆಫ್ ಇಂಡಿಯಾ, ಮೈಸೂರು.
೧೧. ಆರ್ಯನ್ ಕೋಚ್ ವರ್ಕ್ಸ್, ನಾಸಿಕ್.
೧೨. ಜೇಕೋಚ್ ಎಂಟರ್‌ಪ್ರೈಸಸ್, ಬೊಂಬಾಯಿ.
೧೩. ಅಜಾದ್ ಬಾಡಿ ಬಿಲ್ಡರ್ಸ್, ಜಯಪುರ.
೧೪. ಉತ್ಕಲ್ ಆಟೋಮೊಬೈಲ್ಸ್, ಜಂಷೆಡ್‌ಪುರ.
೧೫. ಸುಂದರಂ ಇಂಡಸ್ಟ್ರೀಸ್, ಮಧುರೈ.
೧೬. ಕಿಂಕೋ, ಬೆಂಗಳೂರು.

ಇ) ದಿ. ೩೧-೩-೮೬ರವರೆಗೆ ಅಪಘಾತಕ್ಕೊಳಗಾದ ಬಸ್‌ಗಳ ಸಂಖ್ಯೆ ೯೭೯೩
—ಅದೇ— ಸಾವಿನ ಸಂಖ್ಯೆ ೧೧೭೫
—ಅದೇ— ಗಾಯಗೊಂಡವರು ೧೬೨೮
—ಅದೇ— ಆಸ್ತಿ ಹಾನಿ ರೂ. ೧,೩೫,೦೮,೩೧೭

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತನ್ನ ಸಿಬ್ಬಂದಿ ವರ್ಗದವರಿಗೆ ಪ್ರೋತ್ಸಾಹ ಯೋಜನೆಯನ್ನು ೧೯೮೬ರ ಏಪ್ರಿಲ್ ತಿಂಗಳಿನಿಂದ ಜಾರಿಗೆ ತಂದಿದೆ. ವಿವರಗಳನ್ನು ಸಂಸ್ಥೆಯ ವಿಭಾಗಗಳಿಂದ ಕೇಳಲಾಗಿದೆ. ವಿವರಗಳು ಬಂದನಂತರ ವಿಧಾನಮಂಡಲಕ್ಕೆ ಒದಗಿಸಲಾಗುವುದು.

ಉ) ೧೯೮೫-೮೬ರಲ್ಲಿ ಕೊಳ್ಳಲಾದ ಟೈರ್‌ಗಳ ಕಂಪನಿವಾರು ಮಾಹಿತಿ ಈ ಕೆಳಗೆ ಕೊಡಲಾಗಿದೆ:

೧.	ಅಪೋಲೊ ಟೈರ್ಸ್	೧೭೯೦
೨.	ಬಾಂಬೆ ಟೈರ್ಸ್ ಇಂಟರ್‌ನ್ಯಾಷನಲ್ (ಲಿ)	೮೯೦
೩.	ಸಿಯಟ್ ಟೈರ್ಸ್ ಆಫ್ ಇಂಡಿಯಾ ಲಿ,	೬೦೦
೪.	ಡನ್‌ಲಪ್ ಇಂಡಿಯಾ ಲಿ,	೬೨೫೦
೫.	ಗುಡ್ ಇಯರ್ ಇಂಡಿಯಾ ಲಿ,	೨೧೨೫
೬.	ಜಿ.ಕೆ. ಇಂಡಸ್ಟ್ರೀಸ್ ಲಿ,	೪೨೭೦
೭.	ಎಂ.ಆರ್.ಎಫ್. ಲಿ.	೧೯೫೦
೮.	ಮೋದಿ ರಬ್ಬರ್ ಲಿ,	೯೫೦
೯.	ಪ್ರೀಮಿಯರ್ ಟೈರ್ಸ್ ಲಿ,	೨೮೦೦
೧೦.	ಟೈರ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿ,	೧೧೦೦
೧೧.	ವಿಕ್ರಾಂತ್ ಟೈರ್ಸ್ ಲಿ,	೨೬೪೪೭
	ಒಟ್ಟು	೪೯೧೭೨

ಊ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯನ್ನು ೪ ಕಾರ್ಪೊರೇಷನ್‌ಗಳಾಗಿ ವಿಭಾಗಿಸುವ ಸಾಧ್ಯತೆಯನ್ನು ಪರಿಶೀಲಿಸಲಾಗುತ್ತಿದೆ. ಈ ಮಧ್ಯೆ ಸಂಸ್ಥೆಯ ನಿರ್ವಹಣೆಯಲ್ಲಿ ವಿಕೇಂದ್ರೀಕರಣವನ್ನು ಹೆಚ್ಚಿನ ಬಸ್ ಡಿಪೋಗಳನ್ನು ಒದಗಿಸುವುದು, ನಿರ್ವಹಣೆಯಲ್ಲಿ ಎರಡು ಮಜಲುಗಳನ್ನು ತೆಗೆದುಹಾಕುವುದು, ವಿಭಾಗಗಳಿಗೆ ಕಾರ್ಯಕ್ರಮ ಯೋಜನೆ ರೂಪಿಸುವುದು ಮತ್ತು ವಿಭಾಗದ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವುದು. ಇವುಗಳ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿದೆ.